**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>Spl.C.143/2020</u>**

**<u>P.W.-8</u>**
**<u>C.W.-23</u>**

ಹೆಸರು : ಶೇಖರ್ ಜಿ

ತಂದೆಯ ಹೆಸರು : ಗುರುಬಸವೇಗೌಡ

ವಯಸ್ಸು : 48 ವರ್ಷ

ಉದ್ಯೋಗ : ಪೊಲೀಸ್ ಇನ್ಸ್‌ಪೆಕ್ಟರ್ , ಜಾಲಹಳ್ಳಿ ಸಂಚಾರ ಪೊಲೀಸ್ ಠಾಣೆ , ಬೆಂಗಳೂರು

ವಾಸಸ್ಥಳ : ಬೆಂಗಳೂರು

**<u>ದಿನಾಂಕಃ 18.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –</u>**

2. ದಿ.07.01.2018 ರಿಂದ 11.11.2019 ರವರೆಗೆ ಎ ಸಿ ಬಿ ಪೊಲೀಸ್ ಠಾಣೆ, ಮೈಸೂರು ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

3. ದಿ.05.09.2018 ರಂದು ಮೈಸೂರು ಎಸಿಬಿ ಪೊಲೀಸ್ ಠಾಣಾ ಡಿ ಎಸ್ ಪಿ ಉಮೇಶ್ ಜಿ ಶೇಟ್ ರವರು ಪ್ರಕರಣದ ಕಡತಗಳನ್ನು ಮುಂದಿನ ತನಿಖೆಗಾಗಿ ನನಗೆ ಮೆಮೋ ಮುಖಾಂತರ ನೀಡಿದ್ದು, ಅವುಗಳನ್ನು ಪಡೆದು ಮುಂದಿನ ತನಿಖೆಯನ್ನು ಮಂದುವರೆಸಿರುತ್ತೇನೆ. ಸಾಕ್ಷಿಯು ದಿ.05.09.2018 ರ ಜ್ಞಾಪನವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.25 ಎಂದು , ಸಾಕ್ಷಿಯ ಸಹಿಯನ್ನು ನಿಪಿ.25(ಬಿ) ಎಂದು ಗುರುತಿಸಲಾಯಿತು.

4. ಪ್ರಕರಣದ ಮುಂದುವರೆದ ತನಿಖೆಗಾಗಿ ಪಂಚರನ್ನು ಕಳುಹಿಸಿಕೊಡುವಂತೆ ಕೋರಿ ವ್ಯವಸ್ಥಾಪಕರು , ಜೀವ ವಿಮಾ ನಿಗಮ ಮೈಸೂರು, ಪ್ರಾಚಾರ್ಯರು , ಐಟಿಐ , ಮೈಸೂರು ರವರಿಗೆ ಕೋರಿಕೆ ಪತ್ರವನ್ನು ಕಳುಹಿಸಿರುತ್ತೇನೆ. ಸಾಕ್ಷಿಯೂ ಕೋರಿಕೆ ಪತ್ರವನ್ನು ನೋಡಿ ಅವುಗಳನ್ನು ನಿಪಿ.27(ಪುಟ ಸಂಖ್ಯೆ 7) ಎಂದು, ಸಾಕ್ಷಿಯ ಸಹಿಯನ್ನು ನಿಪಿ. 27(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ಪ್ರಾಚಾರ್ಯರಿಗೆ ಕಳುಹಿಸಿದ ಕೋರಿಕೆ ಪತ್ರವನ್ನು ನೋಡಿ ಅವುಗಳನ್ನು ನಿಪಿ.28 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 28(ಎ) ಎಂದು ಗುರುತಿಸಲಾಯಿತು. ಸದರಿ ಕೋರಿಕಾ ಪತ್ರದಲ್ಲಿಯೇ ಶ್ರೀಪತಿ ಮತ್ತು ನದಿಂ ಪಾಷಾ ರವರನ್ನು ನೇಮಿಸಿ ಅವರ ಹೆಸರುಗಳನ್ನು ನಮೂದಿಸಿ ಕಳುಹಿಸಿಕೊಟ್ಟಿರುತ್ತಾರೆ.

5. ಸದರಿ ಪಂಚರು 12.15 ಗಂಟೆಗೆ ನಮ್ಮ ಕಚೇರಿಗೆ ಬಂದು, ತಮ್ಮ ಪರಿಚಯವನ್ನು ತಿಳಿಸಿರುತ್ತಾರೆ. ನಾನು ನಮ್ಮ ಎದುರುಗಡೆ ಇದ್ದ ದೂರುದಾರರನ್ನು ತೋರಿಸಿ, ಇವರೇ ದೂರುದಾರರು ಎಂದು ಪ್ರಕರಣದ ಸಾರಾಂಶವನ್ನು ತಿಳಿಸಿ , ಸದರಿಯವರುಗಳಿಗೆ ಒಂದು ದೂರಿನ ಪ್ರತಿಯನ್ನು ಕೊಟ್ಟು , ಓದಲು ತಿಳಿಸಿರುತ್ತೇನೆ. ಆ ಬಗ್ಗೆ ಅವರು ಫಿರ್ಯಾದುದಾರರನ್ನು ಕೇಳಲಾಗಿ , ಅವರು ದೂರಿನ ವಿಚಾರಗಳನ್ನು ತಿಳಿಸಿರುತ್ತಾರೆ. ಅವರುಗಳಲ್ಲಿ ಶ್ರೀಪತಿ ಅವರನ್ನು ಪಂಚ-ಸಾಕ್ಷಿ-1 ಎಂದು , ನವೀನ್ ಪಾಷಾ ರವರ ಪಂಚ ಸಾಕ್ಷಿ -2 ಎಂದು ಸೂಚಿಸಲಾಯಿತು.

6. ನಂತರ ಫಿರ್ಯದುದಾರರು ಲಂಚದ ಹಣ 12,000/- ರೂ.ಗಳನ್ನು ಹಾಜರುಪಡಿಸಿದ್ದು, ಅದನ್ನು ಪಂಚ ಸಾಕ್ಷಿ-1 ರವರಿಗೆ ನೀಡಿ ಅವುಗಳ ಮೌಲ್ಯ ಮತ್ತು ಕ್ರಮ ಸಂಖ್ಯೆ ಹೇಳುವಂತೆಯೂ ಪಂಚ ಸಾಕ್ಷಿ-2 ರವರಿಗೆ ಸದರಿ ವಿವರಗಳನ್ನು ಒಂದು ಬಿಳಿ ಹಾಳೆಯಲ್ಲಿ ಬರೆದುಕೊಳ್ಳುವಂತೆ ತಿಳಿಸಿ, ಅದರಂತೆ ಪಂಚ ಸಾಕ್ಷಿ-1 ರವರು ಕ್ರಮವಾಗಿ ತಿಳಿಸಿದ್ದನ್ನು ಪಂಚ ಸಾಕ್ಷಿ-

2 ರವರು ಬರೆದುಕೊಂಡಿರುತ್ತಾರೆ. ಸದರಿ ಹಾಳೆಗೆ ನಾನು ಮತ್ತು ಪಂಚರು, ಮತ್ತು ಫಿರ್ಯಾದಿದಾರರು ಸಹಿ ಹಾಕಿರುತ್ತೇವೆ. ಸಾಕ್ಷಿಯೂ ನಿಪಿ.21 ರಲ್ಲಿ (ಪುಟ ಸಂಖ್ಯೆ 39) ಅನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ.21(ಸಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಎಂಒ–8 ಅನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮಂದೂಡಲಾಯಿತು.)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.